**ದಿನಾಂಕ: 08–09–2011 ರಂದು ಬೆಳಿಗ್ಗೆ 10.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಕಾರ್ಯಪಾಲಕ ಅಭಿಯಂತರರು(ಯೋಜನೆ) ಮತ್ತು ಪರಿಸರ ಕೋಶ – ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | | |
|---|---|---|---|---|---|
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಎಸ್.ರಾಜಾರಾಂ | ಕೌನ್ಸಿಲ್ ಕಾರ್ಯದರ್ಶಿ |
| 2 | ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | 2 | ಡಿ.ಕನಕರಾಜು | ಉಪ ನಿಯಂತ್ರಕರು(ಹಣಕಾಸು) |
| 3 | ಎನ್.ಶಕುಂತಲ | ಸದಸ್ಯರು | 3 | ಗಂಗಹನುಮಯ್ಯ | ಕಾ.ಪಾ.ಅ.(ಕೆರೆಗಳು) |
| 4 | ಅಶ್ವಥ್ ನಾರಾಯಣ.ಜಿ.ಎ. | ಸದಸ್ಯರು | 4 | ಎನ್.ಪಿ.ಚಂದ್ರಶೇಖರ್ | ಕಾ.ಪಾ.ಅ.(ಕೆರೆಗಳು) |
| 5 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 5 | ವಿ.ರವೀಂದ್ರ | ಕಾ.ಪಾ.ಅ.(ಕೆರೆಗಳು) |
| 6 | ಕೇಶವಮೂರ್ತಿ | ಸದಸ್ಯರು | 6 | ಪಿ.ಎಂ.ಜಾನ್ | ಕಾ.ಪಾ.ಅ.(ಯೋಜನೆ–ಪೂರ್ವ) |
| 7 | ಎಸ್.ವಿಜಯನ್ | ಸದಸ್ಯರು | 7 | ಎಂ.ಸಿ.ರಮೇಶ್ | ಕಾ.ಪಾ.ಅ.(ಯೋಜನೆ) |
| 8 | ನಿರ್ಮಲ | ಸದಸ್ಯರು | 8 | ಎಲ್.ವೆಂಕಟೇಶ್ | ಕಾ.ಪಾ.ಅ.(ಯೋಜನೆ–ಪಶ್ಚಿಮ) |
| 9 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 9 | ಆರ್.ನಾಗೇಂದ್ರ | ಸ.ಕಾ.ನಿ.ಆ(ಯೋ–ದಕ್ಷಿಣ) |
| | | | 10 | ಹೊಂಬೇಗೌಡ.ಹೆಚ್. | ಸ.ಕಾ.ನಿ.ಆ(ತೋ–ದಕ್ಷಿಣ) |
| | | | 11 | ಶ್ರೀರಂಗ ರಾಜಪುರೆ | ಸ.ಕಾ.ನಿ.ಆ(ಯೋಜನೆ) |
| | | | 12 | ಟಿ.ಕೃಷ್ಣಮೂರ್ತಿ | ಸಹಾಯಕ ಅಭಿಯಂತರರು(ಯೋ–ದ) |
| | | | 13 | ಸಂಜೀವ್ ಕುಮಾರ್ | ಸಹಾಯಕ ಅಭಿಯಂತರರು(ಯೋ) |
| | | | 14 | ಸತೀಶ್ ಕುಮಾರ್.ಕೆ. | ಕಿರಿಯ ಅಭಿಯಂತರರು(ಯೋ) |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಉದ್ದೇಶಿಸಿ, ಸಭೆಯ ಸೂಚನಾ ಪತ್ರದಲ್ಲಿ ತಿಳಿಸಿರುವ ಮಾಹಿತಿಗಳೊಂದಿಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ಸಭೆಗೆ ನಿಗಧಿತ ಸಮಯದಲ್ಲಿ ಹಾಜರಿರುವಂತೆ ಸೂಚಿಸಿದರು ಹಾಗೂ ಸಭೆಗೆ ಗೈರುಹಾಜರಾಗುವ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡುವಂತೆ ಸೂಚಿಸಿದರು.

ಸಮಿತಿಯು ಪರಿಶೀಲನೆಗೆ ಕೋರುವ ವಿವರಗಳ ಮಾಹಿತಿ ಕಡತಗಳನ್ನು ಪರಿಶೀಲನೆಗೆ ಒದಗಿಸುವಲ್ಲಿ ವಿಳಂಬ ಮಾಡಿ ತಪಾಸಣೆ ಕಾರ್ಯಕ್ರಮಕ್ಕೆ ಅಡಚಣೆ ಉಂಟು ಮಾಡುತ್ತಿದ್ದು, ಸಮಿತಿಯು ನಡೆಸುವ ಪ್ರತಿ ಸಭೆಯಲ್ಲಿಯೂ ಈ ಬಗ್ಗೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗುತ್ತಿದ್ದರೂ ಸಹ ಇದೇ ಪರಿಪಾಠವನ್ನು ಮುಂದುವರೆಸಿಕೊಂಡು ಹೋಗುತ್ತಿರುವ ಅಧಿಕಾರಿಗಳ ಬಗ್ಗೆ ಅಧ್ಯಕ್ಷರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಇನ್ನು ಮುಂದೆ ಈ ರೀತಿ ವಿಳಂಬಕ್ಕೆ ಆಸ್ಪದಕೊಡದಂತೆ ಸಮಿತಿಯು ಕೋರಿರುವ ದಿನಾಂಕದೊಳಗೆ ಮಾಹಿತಿಯನ್ನು ಒದಗಿಸುವಂತೆ ಸೂಚಿಸಿದರು. ಮುಂದಿನ ದಿನಗಳಲ್ಲಿ ಸಮಿತಿಯು ಕೋರುವ ವಿವರಗಳಿಗೆ ಮಾಹಿತಿಯನ್ನು ನಿಗಧಿತ ಸಮಯದಲ್ಲಿ ಒದಗಿಸದಿರುವ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಆಯುಕ್ತರಿಗೆ ಶಿಫಾರಸ್ಸು ಮಾಡಲಾಗುವುದೆಂಬ ಎಚ್ಚರಿಕೆಯನ್ನು ನೀಡಿದರು.

**<u>ಶ್ರೀ.ಚಂದ್ರಶೇಖರ್,ಕಾ.ಪಾ.ಅ.(ಕೆರೆಗಳು)</u>** ರವರು ಮಾತನಾಡುತ್ತಾ, ಮಾಹಿತಿ ಕೋರಿರುವ ಕಡತಗಳಲ್ಲಿ ಕೆಲವು ಕಡತಗಳು ಬಿಲ್‌ಗಾಗಿ ಹೋಗಿದೆ, ಕೆಲವು ಟಿವಿಸಿಸಿಗೆ ಹೋಗಿರುವುದಾಗಿ ತಿಳಿಸಿ, ಅಲ್ಲಿಂದ ಬಂದ ನಂತರ ಸಮಿತಿ ಪರಿಶೀಲನೆಗೆ ಒದಗಿಸಲಾಗುವುದೆಂದು ತಿಳಿಸಿದರು.

**<u>ಅಧ್ಯಕ್ಷರು</u>** ಮಾತನಾಡುತ್ತಾ, ಬಿಲ್ಲುಗಳು ಪೇಮೆಂಟ್‌ಗೆ ಸಮಿತಿಯ ಗಮನಕ್ಕೆ ಬರದೆ ಹೇಗೆ ಹೋಗಿದೆ, ಎಂದು ಪ್ರಶ್ನಿಸುತ್ತಾ, ಯಾವ ಯಾವ ಕಡತಗಳು ಎಲ್ಲೆಲ್ಲಿ ಹೋಗಿವೆ ಎಂಬ ಬಗ್ಗೆ ಮಾಹಿತಿಯ ವಿವರವನ್ನು ಸಿದ್ಧಪಡಿಸಿ ಸಮಿತಿಗೆ ವರದಿ ಮಾಡಲು ಸೂಚಿಸಿದರು.

ಮುಂದುವರೆದಂತೆ, 2010–11ನೇ ಸಾಲಿನ ಆಯವ್ಯಯದಲ್ಲಿ ಲಕ್ಕಸಂದ್ರ ಕ್ವಾರಿ ಅಭಿವೃದ್ಧಿ ಹಾಗೂ ಬೃಂದಾವನದ ಜಿಂಕೆ ತೋಟದ ಅಭಿವೃದ್ಧಿ, ಕೆಂಪಾಂಬುದಿ ಕೆರೆ ಸುಂದರೀಕರಣಕ್ಕೆ ಸಂಬಂಧಪಟ್ಟಂತಹ ಕಾಮಗಾರಿ ಬಗ್ಗೆ, ಸುಬ್ರಮಣ್ಯನಗರದಲ್ಲಿ ಸಂಗೊಳ್ಳಿ ರಾಯಣ್ಣ ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಕಾಮಗಾರಿ ಬಗ್ಗೆ, ಸುಬ್ರಮಣ್ಯನಗರ ಉದ್ಯಾನವನ ಅಭಿವೃದ್ಧಿ ಕಾಮಗಾರಿ ಬಗ್ಗೆ ಮತ್ತು ಜೀವರಾಜ್ ಆಳ್ವ ರಸ್ತೆ ಬಳಿ ಮಕ್ಕಳ ಉದ್ಯಾನವನವನ್ನು ಅಭಿವೃದ್ಧಿ ಕಾಮಗಾರಿಗಳು ಯಾವ ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು. ಜೆ.ಪಿ.ಪಾರ್ಕ್ 2ನೇ ಹಂತದ ಸುಂದರೀಕರಣ ಹಾಗೂ ಯಲಹಂಕ ಕೆರೆಯ ಸಮಗ್ರ ಅಭಿವೃದ್ಧಿಗೆ ಸಂಬಂಧಪಟ್ಟ ಕಡತದ ಬಗ್ಗೆ ಚರ್ಚಿಸಿದರು.

ಅಧ್ಯಕ್ಷರು ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

**1. ವಿಷಯ ಸಂಖ್ಯೆ:ತೋ/ಸ್ಥಾ/ಸ/17/11–12, ದಿನಾಂಕ: 12–08–2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ.151, ಕೋರಮಂಗಲದ ಲಕ್ಷ್ಮೀದೇವಿ ಉದ್ಯಾನವನದಲ್ಲಿ ಬೆಳಿಗ್ಗೆ 10.00 ಗಂಟೆ ರಿಂದ ಸಂಜೆ 4.00 ಗಂಟೆವರೆಗೆ ಪ್ರತಿ ವ್ಯಕ್ತಿಗೆ ರೂ.2.00 ರಂತೆ ಪ್ರವೇಶ ಶುಲ್ಕವನ್ನು ವಸೂಲು ಮಾಡಲಾಗುತ್ತಿದೆ. ಇದರಿಂದ ಪಾಲಿಕೆಗೆ ಕಳೆ ವರ್ಷ ರೂ.1,20,372/–ಗಳು ಹಣ ಸಂಗ್ರಹವಾಗಿರುತ್ತದೆ. ಆದರೆ, ಈ ರೀತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ದಕ್ಷಿಣ ವಿಭಾಗದ ಯಾವುದೇ ಉದ್ಯಾನವನಗಳಲ್ಲಿ ಪ್ರವೇಶ ಶುಲ್ಕ ನಿಗಧಿಪಡಿಸಿರುವುದಿಲ್ಲ. ಸದರಿ ಉದ್ಯಾನವನದ ಪ್ರವೇಶಕ್ಕಾಗಿ ಪಡೆಯುತ್ತಿರುವ ಪ್ರವೇಶ ಶುಲ್ಕವನ್ನು ತೆಗೆದುಕೊಳ್ಳುತ್ತಿರುವ ಬಗ್ಗೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸಿರುತ್ತಾರೆ.

ಆದ್ದರಿಂದ, ಈ ಉದ್ಯಾನವನದಲ್ಲಿ ಸಾರ್ವಜನಿಕರಿಂದ ಈಗ ತೆಗೆದುಕೊಳ್ಳುತ್ತಿರುವ ಪ್ರವೇಶ ಶುಲ್ಕವನ್ನು ನಿಲ್ಲಿಸಲು ಹಾಗೂ ಉದ್ಯಾನವನಕ್ಕೆ ಮುಕ್ತವಾಗಿ ಪ್ರವೇಶಕ್ಕೆ ಅವಕಾಶ ನೀಡುವ ಬಗ್ಗೆ ಅಗತ್ಯ ತೀರ್ಮಾನಕ್ಕಾಗಿ ಹಾಗೂ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:05–08–2011 ರ ಟಿಪ್ಪಣಿ.

**<u>ನಿರ್ಣಯ</u> : – ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.**

**2. ವಿಷಯ ಸಂಖ್ಯೆ:ತೋ/ಸ್ಥಾ/ಸ/18/11–12, ದಿನಾಂಕ: 12–08–2011**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು 1177 ತೆರೆದ ಪ್ರದೇಶಗಳನ್ನು ಗುರುತಿಸಿದ್ದು, ಅವುಗಳಲ್ಲಿ 839 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಲಾಗಿದೆ. ಉಳಿದ 338 ತೆರೆದ ಪ್ರದೇಶಗಳನ್ನು ಉದ್ಯಾನವನಗಳನ್ನಾಗಿ ಅಭಿವೃದ್ಧಿ ಪಡಿಸಬೇಕಾಗಿದೆ.

ಅಭಿವೃದ್ಧಿ ಪಡಿಸಿರುವ 839 ಉದ್ಯಾನವನಗಳನ್ನು ಬೆಳಿಗ್ಗೆ 5.30 ರಿಂದ 8.30 ರವರೆಗೆ ಮತ್ತು ಸಂಜೆ 4.00 ರಿಂದ 7.30 ರವರೆಗೆ ತೆರೆದು ಸಾರ್ವಜನಿಕರಿಗೆ ಅವಕಾಶ ಕಲ್ಪಿಸಲಾಗಿದೆ.

ಆದರೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗರವರ ಪತ್ರದ ಸಂಖ್ಯೆ : ಕರಾಮಹರ : ದೂರು : 03 : 2010–2011/871, ದಿನಾಂಕ:19–10–2010ರ ಪತ್ರದೊಂದಿಗೆ ಲಗತ್ತಿಸಿರುವ **INTERIM ORDER** Dated:13.10.2010 ರ **Recommendations** ನ ಕ್ರಮ ಸಂಖ್ಯೆ(2)ರಲ್ಲಿ **Timings** :To enable children utilize the parks and playgrounds, it must be kept open from 7.00 am to 7.00 pm. Between 10.00 am to 4.00 pm it would be kept open exclusively for schools to bring in children after advance booking. This would ensure the maximum utilization of the parks and playgrounds to the benefit of children and would be in their best interests ಎಂದು ತಿಳಿಸಲಾಗಿದೆ. (ಪ್ರತಿ ಲಗತ್ತಿಸಿದೆ)

ಈ ಹಿನ್ನೆಲೆಯಲ್ಲಿ ಉದ್ಯಾನವನಗಳು ಮತ್ತು ಆಟದ ಮೈದಾನಗಳನ್ನು ಬೆಳಿಗ್ಗೆ 7.00 ರಿಂದ ಸಂಜೆ 7.00 ರವರೆಗೆ ತೆರೆಯುವ ಬಗ್ಗೆ ಹಾಗೂ ಮೊದಲೇ ಅನುಮತಿ ಪಡೆದು ಬರುವ ಶಾಲೆಗಳಿಗೆ (ಶಾಲಾ ಮಕ್ಕಳಿಗೆ) ಬೆಳಿಗ್ಗೆ 10.00 ರಿಂದ 4.00 ರವರೆಗೆ ಅವಕಾಶ ಕಲ್ಪಿಸುವ ಕುರಿತು ಕೌನ್ಸಿಲ್ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಹಾಗೂ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:03–08–2011 ರ ಟಿಪ್ಪಣಿ.

**<u>ನಿರ್ಣಯ</u> :– ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.**

**3. ವಿಷಯ ಸಂಖ್ಯೆ:ತೋ/ಸ್ಥಾ/ಸ/19/11–12, ದಿನಾಂಕ: 29–08–2011**

ಬೆಂಗಳೂರು ದಕ್ಷಿಣ ತಾಲ್ಲೂಕು, ರಾಜರಾಜೇಶ್ವರಿ ನಗರ ವಲಯದ ಹಲಗೇವಡೇರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ–1ರ ಕಾಮಗಾರಿಗೆ ಮುಖ್ಯ ಅಭಿಯಂತರರು (ಪರಿಸರ ಕೋಶ – ಕೆರೆಗಳು) ರವರು ರೂ.299.80 ಲಕ್ಷಗಳ ಅಂದಾಜುಪಟ್ಟಿಗೆ 2010–11 ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು–5, ಪರಿಸರ ಕೋಶ, ಕೆರೆಗಳು ರವರು ಮೊದಲನೇ ಕರೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 (ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಇಬ್ಬರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು–5, ಪರಿಸರ ಕೋಶ, ಕೆರೆಗಳು ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎನ್.ಎಮ್.ಕೃಷ್ಣಮೂರ್ತಿ, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು **ರೂ.2,69,12,607.11** ಗಳಾಗಿದ್ದು, ಇದರ **ಕಾಮಗಾರಿ ಪ್ರಮಾಣ ಸಂಖ್ಯೆ : 308–11–000007**. ಈ ಕಾಮಗಾರಿಗೆ ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ **ಶ್ರೀ.ಎನ್.ಎಮ್.ಕೃಷ್ಣಮೂರ್ತಿರವರು** ಶೇಕಡ **7.20%** ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್‌ನ್ನು ಅನುಮೋದಿಸಲು ಮುಖ್ಯ ಅಭಿಯಂತರರು(ಪರಿಸರ ಕೋಶ – ಕೆರೆಗಳು) ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) **ರೂ.2,49,74,384.43** ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:**ಯು.ಡಿ.ಡಿ/335/ಎಮ್‌ಎನ್‌ವೈ/ 2007 (ಭಾ), ದಿನಾಂಕ:11-05-2009**ರ ರೀತ್ಯಾ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ **ಸಂಖ್ಯೆ:ಯು.ಡಿ.ಡಿ/636/ಎಮ್‌ಎನ್‌ವೈ/2010, ಬೆಂಗಳೂರು, ದಿನಾಂಕ: 02-04-2011**ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ **ಶ್ರೀ.ಎನ್.ಎಮ್.ಕೃಷ್ಣಮೂರ್ತಿ** ರವರು 2010-11ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 7.20% ರಷ್ಟು ಕಡಿಮೆ ದರಗಳು ಅಥವಾ ರೂ.**2,49,74,384.43** (ರೂಪಾಯಿ ಎರಡು ಕೋಟಿ ನಲವತ್ತೊಂಭತ್ತು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಮೂರು ನೂರ ಎಂಭತ್ತಾನಾಲ್ಕು ರೂಪಾಯಿ, ನಲವತ್ತಾಮೂರು ಪೈಸೆಗಳು ಮಾತ್ರ) ಗಳ ಟೆಂಡರ್‌ನ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:23-08-2011 ರ ಟಿಪ್ಪಣಿ.

**<u>ನಿರ್ಣಯ</u> :- ಆಯುಕ್ತರ ದಿನಾಂಕ:23-08-2011 ರ ಟಿಪ್ಪಣಿಯನ್ನು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳನ್ನು ಸರಿಪಡಿಸಲು ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮವಹಿಸುವಂತೆ, ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು:-</u>

- ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಯುಕ್ತರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಮುಖ್ಯ ಅಭಿಯಂತರರು(ಪರಿಸರ ಕೋಶ - ಕೆರೆಗಳು) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಪರಿಸರ ಕೋಶ-ಕೆರೆಗಳು) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ - ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ಮತ್ತು ಪೂರ್ವ ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ.